862

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎ.ಪಿ.ಶಿವಕುಮಾರ, ಸಹಾಯಕ ಕೃಷಿ ನಿರ್ದೇಶಕರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ವಿರುದ್ದದ ಲೋಕಾಯುಕ್ತ ಪ್ರಕರಣದ ಬಗ್ಗೆ ಲೋಕಾಯುಕ್ತರಿಗೆ ವಿಚಾರಣೆ ನಡೆಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:-

ಉಪ ನಿಭಂದಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂ. COMPT/UPLOK/MYS-615/2013/DRE-1, ದಿನಾಂಕ:20-08-2013.

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ, ಶ್ರೀ ಎ.ಪಿ.ಶಿವಕುಮಾರ, ಇವರು ಸಹಾಯಕ ಕೃಷಿ ನಿರ್ದೇಶಕರಾಗಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ:06-07-2011 ರಂದು ಶ್ರೀ ಹೆಚ್.ರಮೇಶ್ ಬಿನ್ ಹುಲಿಯಪ್ಪ ಸೋಮದೇವರಗುಡಿ ಬೀದಿ, ಕಡೂರು ಟೌನ್, ಚಿಕ್ಕಮಗಳೂರು ಜಿಲ್ಲೆ, ಎಂಬುವರಿಂದ ಸ್ಪ್ರಿಂಕ್ಲರ್ ಸೆಟ್‌ನ್ನು ಕೊಡಿಸಲು ರೂ.6,550/- (ಸ್ಪ್ರಿಂಕ್ಲರ್ ಸೆಟ್‌ನ ಬಾಬ್ತು ರೂ.5.256/- ಮತ್ತು ಲಂಚದ ಹಣ ರೂ.1,394/-) ಹಣವನ್ನು ಸ್ವೀಕರಿಸುವಾಗ ಲೋಕಾಯುಕ್ತ ಪೋಲಿಸರ ಟ್ರ್ಯಾಪ್‌ಗೆ ಒಳಗಾದ ಕಾರಣ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಸೆಕ್ಷನ್12(3)ರ ಅನುಸಾರ ತನಿಖೆ ನಡೆಸಿ ಅವರ ವಿರುದ್ಧ ಕ್ರಮವಹಿಸಲು ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿಗಳು, 1957ರ ನಿಯಮ 14-ಎ ರನ್ವಯ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಮಾನ್ಯ ಉಪ ಲೋಕಾಯುಕ್ತರು-II ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು-II ರವರು ಕೋರಿರುವ ಪ್ರಕಾರ, ಶ್ರೀ ಎ.ಪಿ.ಶಿವಕುಮಾರ, ಇವರು ಸಹಾಯಕ ಕೃಷಿ ನಿರ್ದೇಶಕರಾಗಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) ಪ್ರಕಾರ ತಪ್ಪೆಸಗಿದ್ದಾರೆಂದು ಮೇಲು ನೋಟಕ್ಕೆ (prima-facie) ಕಂಡು ಬಂದಿದ್ದರಿಂದ, ಅವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-11 ಪ್ರಕಾರ ವಿಚಾರಣೆ ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಾವಳಿಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು

--2--

ಮಾನ್ಯ ಉಪ ಲೋಕಾಯುಕ್ತ-II ರವರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 37 ಕೃಪವಿ 2011.**

**ಬೆಂಗಳೂರು, ದಿನಾಂಕ:14-11-2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಎ.ಪಿ.ಶಿವಕುಮಾರ, ಇವರು ಸಹಾಯಕ ಕೃಷಿ ನಿರ್ದೇಶಕರಾಗಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ:06-07-2011 ರಂದು ಶ್ರೀ ಹೆಚ್.ರಮೇಶ್ ಬಿನ್ ಹುಲಿಯಪ್ಪ ಸೋಮದೇವರಗುಡಿ ಬೀದಿ, ಕಡೂರು ಟೌನ್, ಚಿಕ್ಕಮಗಳೂರು ಜಿಲ್ಲೆ, ಎಂಬುವರಿಗೆ ಇಲಾಖೆಯ ವತಿಯಿಂದ ಸ್ಪ್ರಿಂಕ್ಲರ್ ಸೆಟ್‌ನ್ನು ಕೊಡಿಸಲು ರೂ.6,550/-(ಸ್ಪ್ರಿಂಕ್ಲರ್ ಸೆಟ್‌ನ ಬಾಬ್ತು ರೂ.5,256/- ಮತ್ತು ಲಂಚದ ಹಣ ರೂ.1,394/-) ಹಣವನ್ನು ಸ್ವೀಕರಿಸುವಾಗ ಲೋಕಾಯುಕ್ತ ಪೋಲಿಸರ ಟ್ರ್ಯಾಪ್‌ಗೆ ಒಳಗಾದ ಆರೋಪಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮ-11ರಲ್ಲಿ ನಿರೂಪಿಸಿರುವಂತೆ ಇಲಾಖಾ ವಿಚಾರಣಾ ಕ್ರಮವನ್ನು ಆಯೋಜಿಸಲು, ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಸದರಿ ಪ್ರಕರಣವನ್ನು ಕರ್ನಾಟಕ ಉಪ-ಲೋಕಾಯುಕ್ತ-II ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:-**

1. ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ,
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.